# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1297

ಸದಸ್ಯರ ಹೆಸರು : ಶ್ರೀ ಎಸ್.ವಿ. ಸಂಕನೂರ (ಪದವೀಧರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 17.12.2025

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶು ಸಂಗೋಪನಾ ಮತ್ತು ರೇಷ್ಮೆ ಇಲಾಖೆ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯಿಂದ 2013 ರಿಂದ 2018ರ ಅವಧಿಯಲ್ಲಿ ಜಾನುವಾರು ಹಾಗೂ ಕುಕ್ಕುಟ ಮಾಹಿತಿ ಪುಸ್ತಕವನ್ನು ಮುದ್ರಿಸಿ ಪ್ರಾಯೋಗಿಕವಾಗಿ ವಿತರಿಸಲಾಗಿತ್ತೇ; ಹಾಗಿದ್ದಲ್ಲಿ ಎಷ್ಟು ಪುಸ್ತಕಗಳನ್ನು ಯಾವ ಯಾವ ಜಿಲ್ಲೆಗೆ ವಿತರಿಸಲಾಗಿತ್ತು; (ಜಿಲ್ಲಾವಾರು ಮಾಹಿತಿ ನೀಡುವುದು) | ಹೌದು ವಿತರಿಸಲಾಗಿದೆ.<br><br>ಪಶುಸಂಗೋಪನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯಿಂದ 2013 ರಿಂದ 2018ರ ಅವಧಿಯಲ್ಲಿ ಜಾನುವಾರು ಹಾಗೂ ಕುಕ್ಕುಟ ಮಾಹಿತಿ ಪುಸ್ತಕವನ್ನು ಮುದ್ರಿಸಿ ಪ್ರಾಯೋಗಿಕವಾಗಿ ವಿತರಿಸಲಾಗಿತ್ತು.<br>ಜಿಲ್ಲಾವಾರು ಮಾಹಿತಿ ಕೆಳಕಂಡತಿವೆ. |

| ಕ್ರ.ಸಂ | ಜಿಲ್ಲೆ | ಸಂಖ್ಯೆ |
|---|---|---|
| 1 | ಗದಗ | 50000 |
| 2 | ಬಾಗಲಕೋಟೆ | 50000 |
| 3 | ಕೊಪ್ಪಳ | 115619 |
| 4 | ಬಳ್ಳಾರಿ | 123600 |
| 5 | ಕೋಲಾರ | 123878 |
| 6 | ಬೆಂಗಳೂರು ಗ್ರಾಮಾಂತರ | 41292 |
| 7 | ಚಿಕ್ಕಮಗಳೂರು | 65840 |
| 8 | ಬೀದರ್ | 82400 |
| 9 | ಚಿಕ್ಕಬಳ್ಳಾಪುರ | 61957 |
| 10 | ಉತ್ತರಕನ್ನಡ | 78299 |
| 11 | ಹಾಸನ | 45331 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಈ ಪುಸ್ತಕ ಪ್ರಕಟಣೆ ಹಾಗೂ ವಿತರಣೆಗಾಗಿ ಖರ್ಚು ಮಾಡಿದ ಹಣವೆಷ್ಟು; | ಪುಸ್ತಕ ಪ್ರಕಟಣೆ ಹಾಗೂ ವಿತರಣೆಗಾಗಿ ಖರ್ಚು ಮಾಡಿದ ಒಟ್ಟು ಹಣ ರೂ 2,30,94,123-00 ಆಗಿರುತ್ತದೆ. |

| | | |
|---|---|---|
| ಇ) | ಇತ್ತೀಚಿನ ದಿನಗಳಲ್ಲಿ ಸರಕಾರವು ಜಾನುವಾರು ಹಾಗೂ ಕುಕ್ಕುಟಗಳ ನಿಖರವಾದ ಅಂಕಿ-ಅಂಶಗಳನ್ನು ಪಡೆಯಲು ಯಾವ ರೀತಿ ಕ್ರಮ ಕೈಗೊಂಡಿದೆ? (ವಿವರವಾದ ಮಾಹಿತಿ ನೀಡುವುದು) | ಜಾನುವಾರು ಅಂಕಿ-ಅಂಶಗಳನ್ನು ಜಾನುವಾರು ಗಣತಿ ಮುಖಾಂತರ ಪಡೆಯಲಾಗುತ್ತದೆ. ಜಾನುವಾರು ಗಣತಿಯು ಪ್ರತಿ ಐದು ವರ್ಷಗಳಿಗೊಮ್ಮೆ ದೇಶಾದ್ಯಂತ ನಡೆಯುವ ರಾಷ್ಟ್ರೀಯ ಕಾರ್ಯಕ್ರಮವಾಗಿರುತ್ತದೆ. ನಿಖರ ಮಾಹಿತಿ ಪಡೆಯುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.<br>1. ಕಾರ್ಯಕ್ರಮದ ಔಚಿತ್ಯ ಹಾಗೂ ಪ್ರಾಮುಖ್ಯತೆ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಚಾರಗಳನ್ನು ವಿವಿಧ ರೀತಿಯ ಮಾಧ್ಯಮಗಳಲ್ಲಿ ನೀಡಲಾಗಿರುತ್ತದೆ.<br>2. ಗಣತಿದಾರರು ಪ್ರತಿ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ, ಅಂಕಿ-ಅಂಶಗಳನ್ನು ಭೇಟಿಯ ಸಂದರ್ಭದಲ್ಲಿಯೇ, ಭಾರತ ಸರ್ಕಾರದಿಂದ ಅಭಿವೃದ್ಧಿಪಡಿಸಲಾದ App ನಲ್ಲಿ ನಮೂದಿಸಲಾಗುತ್ತದೆ.<br>3. ಸದರಿ App ನಲ್ಲಿ ಅಳವಡಿಸಿರುವ GEO TAGING ವ್ಯವಸ್ಥೆಯು ಮಾಹಿತಿಯು ಆಗಿಂದಾಗ್ಗೆ ನಮೂದಾದ ಕುರಿತು ಖಚಿತ ಮಾಹಿತಿ ಒದಗಿಸುವುದರೊಂದಿಗೆ ಯಾವ ಕುಟುಂಬವೂ ಗಣತಿ ಕಾರ್ಯದಿಂದ ಹೊರತಾಗದ ಕುರಿತು ಖಚಿತಪಡಿಸುತ್ತದೆ.<br>4. ಸದರಿ App ನಲ್ಲಿ ಗಣತಿದಾರರಿಗೆ ಜಾನುವಾರು ತಳಿಗಳನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ, ವಿವಿಧ ಜಾನುವಾರು ತಳಿಗಳ ಚಿತ್ರಗಳನ್ನು ಅಳವಡಿಸಲಾಗಿರುತ್ತದೆ. ಅಂತೆಯೇ ನಿಖರ ಮಾಹಿತಿ ಪಡೆಯಲಾಗುತ್ತದೆ.<br>5. ಹೀಗೆ ಪ್ರತಿ ಗ್ರಾಮ/ನಗರ ಪ್ರದೇಶಗಳ ಗಣತಿ ಕಾರ್ಯ ಮುಗಿದ ನಂತರ ಮೇಲ್ವಿಚಾರಕರು ಭೇಟಿ ನೀಡಿ ಮಾಹಿತಿ/ಅಂಕಿ-ಅಂಶಗಳ ನಿಖರತೆ ಬಗ್ಗೆ ಪರಿಶೀಲಿಸಿ ಅಗತ್ಯ ತಿದ್ದುಪಡಿ ಮಾರ್ಪಾಡುಗಳೊಂದಿಗೆ ಅನುಮೋದಿಸುತ್ತಾರೆ.<br>6. ಅಂತಿಮವಾಗಿ ಮಾಹಿತಿಯು, ಜಿಲ್ಲಾ ನೋಡಲ್ ಅಧಿಕಾರಿಗಳಾದ ಉಪನಿರ್ದೇಶಕರು (ಆಡಳಿತ) ರವರು ಮಾಹಿತಿಯ ನಿಖರತೆ ಪರಿಶೀಲಿಸಿದ ನಂತರ ಅನುಮೋದಿಸಲ್ಪಡುತ್ತದೆ.<br>7. ನಿಖರವಾದ ಅಂಕಿ-ಅಂಶಗಳನ್ನು ಪಡೆಯುವ ನಿಟ್ಟಿನಲ್ಲಿ ಮಾಹಿತಿಯು ವಿವಿಧ ಹಂತಗಳಲ್ಲಿ ಪರಿಶೀಲನೆಗೊಳಪಡುತ್ತದೆ.<br>ಯಾವ ಕುಟುಂಬ/ಜಾನುವಾರುಗಳೂ ಸಹ ಗಣತಿ ಕಾರ್ಯದಿಂದ ಹೊರತಾಗಬಾರದು ಎಂಬ ನಿಟ್ಟಿನಲ್ಲಿ ಅಲೆಮಾರಿ ಕುಟುಂಬ ಹಾಗೂ ಜಾನುವಾರುಗಳ ಮಾಹಿತಿಯನ್ನೂ ಸಹ ಪಡೆಯಲಾಗುತ್ತದೆ. |

**ಸಂಖ್ಯೆ: ಪಸಂಮೀ 291ಸಲೆಪ 2025**

(ಸಹಿ)

**(ಕೆ.ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.